ದಿನಾಂಕ 09.02.2017 ರ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಕೆಎಸ್ಎಸ್ ರವರಿಂದ ಃ

ನನ್ನ ತಂದೆಗೆ ನಾನೊಬ್ಬನೇ ಮಗ. ನನ್ನತಂದೆಗೆ ಒಡಹುಟ್ಟಿದವರು 3 ಜನ. ಮಾಂತಪ್ಪ, ಮಲ್ಲಣ್ಣ ಮತ್ತು ಬಸವಣ್ಣ. ಬಸವಣ್ಣನಿಗೆ 4 ಜನ ಮಕ್ಕಳು. ಶೇಖರ, ಮಲ್ಲಿಕಾರ್ಜುನಸ್ವಾಮಿ, ಮರಿದೇವರು ಅಲಿಯಾಸ್ ರವಿ, ಮತ್ತು ಕುಮಾರ. ಶೇಖರರವರು ಮೃತಪಟ್ಟಿರುತ್ತಾರೆ. ನನ್ನ ತಂದೆ ಮತ್ತು ಅವರ ಅಣ್ಣತಮ್ಮಂದಿರು ಪಿತ್ರಾರ್ಜಿತ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಿಭಾಗದಂತೆ ಸರ್ವೆ ನಂಬರ್ 394 ರಲ್ಲಿ ಅರ್ಧ ಜಮೀನು ನನಗೂ ಅರ್ಧ ಜಮೀನು ಬಸವಣ್ಣರವರಿಗೂ ಹೋಗಿದೆ ಎಂದರೆ ಸರಿ. ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಮರಿದೇವರು ಅಲಿಯಾಸ್ ರವಿರವರಿಗೆ ನೀಡಲಾಗಿದೆ ಎಂದರೆ ಸರಿ. ಪ್ರತಿವಾದಿಯು ಮರಿದೇವರು ಅಲ್ತಿಯಾಸ್ ರವಿ ರವರಿಂದ ಷೆಡ್ಯೂಲ್ ಬಿ ಸ್ವತ್ತನ್ನು ದಿನಾಂಕ 22.03.2001 ರಂದು ಖರೀದಿ ಮಾಡಿದ್ದಾರೆ ಎಂದರೆ ಸರಿ. ಖರೀದಿ ಮಾಡಿದ ದಿನದಿಂದ ಪ್ರತಿವಾದಿಗಳು ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿ ಖರೀದಿ ಮಾಡಿದ ಪೂರ್ವದಲ್ಲಿ ಬಸವಣ್ಣರವರ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಅವರು ನಮ್ಮ ಹಿಸ್ಸೆಗೆಬಂದ ಆಸ್ತಿಯಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ವಿಭಾಗ ಪತ್ರದಲ್ಲಿ ಬಸವಣ್ಣರವರ ಹಿಸ್ಸೆಗೆ ಕಾಣಿಸಿದ ಜಮೀನನ್ನು ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಪ್ರ2ವಾದಿಗೆ ಕ್ರಯಪತ್ರದಲ್ಲಿ ಕಾಣಿಸಿದ ಚೆಕ್ಕುಬಂದಿಯನ್ನು ಈ ಕೇಸು ದಾಖಲಿಸುವ ಮೊದಲು ಅಥವಾ ನಂತರ ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಯು ಈ ಕೇಸಿನಲ್ಲಿ ಏನು ತಕರಾರು ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ಕ್ರಯಕ್ಕೆ ಪಡೆದ ನಂತರ 2009 ರಲ್ಲಿ ಬೋರನ್ನು ಹಾಕಿಸಿದ್ದಾರೆ ಎಂದರೆ ಸರಿಯಲ್ಲ. ಮೂಲದ ಸಂಖ್ಯೆ 149/2016 ರಂತೆ ಪ್ರತಿವಾದಿಯು ನನ್ನ ವಿರುದ್ದ ಒಂದು ಸಿವಿಲ್ ದಾವೆಯನ್ನು ಹಾಕಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನಗೆ ಸಮನ್ಸ್ ಜಾರಿಯಾಗಿದ್ದು ನಾನು ವಕೀಲರ ಮೂಲಕ ಹಾಜರಾಗಿದ್ದೇನೆ ಎಂದರೆ ಸಾಕ್ಷಿಯು ಹಾಜರಾಗಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯು 39 ಗುಂಟೆ ಬಗ್ಗೆ ಪರಿಹಾರ ಕೋರಿ ನ್ಯಾಯಾಲಯಕ್ಕೆ ಕೇಸನ್ನು ಹಾಕಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಯ ವಿಚಾರಣೆ ಆಗಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನುಯಾವುದೇ ಲಿಖಿತ ಹೇಳಿಕೆಯನ್ನು ಹಾಕಿಲ್ಲ ಎಂದರೆ ಸಾಕ್ಷಿಯು ಮೌನವಾಗಿದ್ದಾರೆ. ಆ ರೀತಿ ಲಿಖಿತ ಹೇಳಿಕೆಯನ್ನು ಹಾಕಲು ತೊಂದರೆ ಇರಲಿಲ್ಲ ಎಂದರೆ

ಸಾಕ್ಷಿಯು ಮೌನವಾಗಿದ್ದಾರೆ. ಸರ್ವೆ ನಂಬರ್ 194 ರ ದಕ್ಷಿಣಕ್ಕೆ ಕೆರೆ ಅಂಗಳ ಇದೆ ಎಂದರೆ ಸರಿ. ಪಶ್ಚಿಮಕ್ಕೆ ರಸ್ತೆ ಇದೆ ಎಂದರೆ ಸರಿ. ಉತ್ತರಕ್ಕೆ ಮಲ್ಲಿಕಾರ್ಜುನಸ್ವಾಮಿರವರ ಜಮೀನು ಇದೆ ಎಂದರೆ ಸರಿ. ಪಶ್ಚಿಮದ ಕಡೆ ಕೆರೆ ಮತ್ತು ದಕ್ಷಿಣದ ಕಡೆ ಕೆರೆಯಜಾಗದಲ್ಲಿ ಮರಿದೇವರು ಅಲಿಯಾಸ್ ರವಿರವರು 10 ಗುಂಟೆ ಜಮೀನನ್ನು ಒತ್ತುವರಿ ಮಾಡಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮಾರಾಟ ಮಾಡುವಾಗ ಮರಿದೇವರು ಅಲಿಯಾಸ್ ರವಿ ರವರು ಸ್ವಾಧೀನದಲ್ಲಿದ್ದ ಆಸ್ತಿಯನ್ನು ಪ್ರತಿವಾದಿಗೆ ಗುತ್ತಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ನಾನು 2013 ನೇ ಇಸವಿಯಲ್ಲಿ ನಂಜುಂಡೇಶ್ವರ ಬೋರ್‌ವೆಲ್ಸ್‌ರವರ ಮೂಲಕ ಬೋರ್‌ವೆಲ್ ತೆಗೆಸಿರುತ್ತೇನೆ. ನಂಜುಂಡೇಶ್ವರ ಬೋರ್‌ವೆಲ್‌ರವರ ಕಚೇರಿಯು ಮಳವಳ್ಳಿಯಲ್ಲಿದೆ. ಅದರ ವಿಳಾಸ ನನಗೆ ಗೊತ್ತಿಲ್ಲ. ಬೋರ್‌ವೆಲ್ ಕೊರಸಲು ಮಾತನಾಡಲು ಕಚೇರಿಗೆ ನನ್ನ ಮಗ ಹೋಗಿರುತ್ತಾರೆ. ನಾನು ಸದರಿ ಕಚೇರಿಯನ್ನು ನೋಡಿರುವುದಿಲ್ಲ ಮತ್ತು ಹೋಗಿರುವುದಿಲ್ಲ. ದಾಖಲಾತಿಗಳನ್ನು ಬೋರ್‌ವೆಲ್ ಕಚೇರಿಯಿಂದ ಯಾರುಪಡೆದರು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮಗ ಪಡೆದರು ಎಂದುನುಡಿಯುತ್ತಾರೆ. ನಾನು ಬೋರ್‌ವೆಲ್‌ರವರನ್ನು ಖುದ್ದಾಗಿ ಸಂಪರ್ಕಿಸುವುದಾಗಲಿ ಮಾಡಿರುವುದಿಲ್ಲ. ನನಗೆ ಬೋರ್‌ವೆಲ್ ಕೊರೆಸಿದ ಕಚೇರಿ ಬಗ್ಗೆ ಮತ್ತು ದಾಖಲೆಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಂಜುಂಡೇಶ್ವರ ಬೋರ್‌ವೆಲ್ ಕಂಪನಿಯು ಮಳವಳ್ಳಿಯಲ್ಲಿ ಇಲ್ಲ ಎಂದರೆ ಸಾಕ್ಷಿಯು ಮೌನವಾಗಿದ್ದಾರೆ. ಈ ಬಗ್ಗೆ ಭೂ ಮತ್ತು ಗಣಿ ವಿಜ್ಞಾನಿ, ಅಂತರ್ಜಲ ಕಚೇರಿ ರವರು ಅಂತಹ ಬೋರ್‌ವೆಲ್ ಕಂಪನಿಯವರು ಯಾವುದೇ ನೋಂದಣಿಯಾಗಿಲ್ಲ ಎಂದು ಹಿಂಬರಹವನ್ನು ನೀಡಿದ್ದಾರೆ ಎಂದರೆ ಸಾಕ್ಷಿಯು ಮೌನವಾಗಿದ್ದಾರೆ. ಮಳವಳ್ಳಿ ಗ್ರಾಮಪಂಚಾಯಿತಿಯವರು ಕೂಡ ನಂಜುಂಡೇಶ್ವರ ಬೋರ್‌ವೆಲ್ ಕಂಪನಿಯು ಅಲ್ಲಿ ಇಲ್ಲ ಎಂದು ಮಾಹಿತಿ ನೀಡಿದ್ದಾರೆ ಎಂದರೆ ಸಾಕ್ಷಿಯು ಮೌನವಾಗಿದ್ದಾರೆ. ನಂಜುಂಡೇಶ್ವರ ಬೋರ್‌ವೆಲ್ ಕಂಪನಿಯವರು ಸಕ್ಷಮ ಪ್ರಾಧಿಕಾರದಿಂದ ಬೋರ್‌ವೆಲ್ ಕೊರೆಯಲು ಪರವಾನಗಿ ಪಡೆದಿದ್ದಾರ ಎಂಬ ಪ್ರಶ್ನೆಗೆ ಸಾಕ್ಷಿಯು ಮೌನವಾಗಿದ್ದಾರೆ. ನಂಜುಂಡೇಶ್ವರ ಬೋರ್‌ವೆಲ್ ಕಂಪನಿಯ ಮಾಲೀಕರು ಯಾರು ಎಂಬ ಪ್ರಶ್ನೆಗೆ ಸಾಕ್ಷಿಯು ಮಾಲೀಕ ಯಾರು ಎಂಬ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಾಲೀಕರನ್ನು ನಾನು ನೋಡಿರುವುದಿಲ್ಲ. ಆರೀತಿ ಬೋರ್‌ವೆಲ್ ಮಾಲೀಕರನ್ನು ಕರೆಸಿ ವಿಚಾರಣೆ ಮಾಡಲು ತೊಂದರೆ

ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಕರೆಸುತ್ತೇನೆ ಎಂದು ನುಡಿಯುತ್ತಾರೆ. ನಂಜುಂಡೇಶ್ವರ ಬೋರ್‌ವೆಲ್ ಅಸ್ತಿತ್ವದಲ್ಲಿಲ್ಲ ಸೃಷ್ಟಿ ಮಾಡಿದ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲು ಮಾಡಲು ಶ್ರೀ ಕೆಎಸ್‌ಎಸ್ ವಕೀಲರು ಸಮಾಯಾವಕಾಶ ಕೋರಿದ್ದು ಮುಂದೂಡಲಾಯಿತು.

ಓ ಹೇ ಕೇ ಸ ಇದೆ

ಸಿವಿಲ್ ನ್ಯಾಯಾಧೀಶರು,
ಟಿ ನರಸೀಪುರ.